

ಲಿನೋ ಕಟ್ ಕೃತಿ



ಸ್ನೇಹಿತನ ಚಿತ್ರಣವೆಂಬ ಕಾರಣಕ್ಕೆ ಸೊರಗಿದ ಕುಂಚದ ಎಳೆತಗಳು

ಹತ್ತೇ ನಿಮಿಷದಲ್ಲಿ ಡೆಮೊ ಮಾಡಿ ಮುಗಿಸಿದ್ದರಿಂದ ಎಲ್ಲರೂ ಬೆರಗಾಗಿಬಿಟ್ಟಿದ್ದರು. ಇಂಥ ಖ್ಯಾತಿಗಳು ನನ್ನ ಬೆನ್ನಿಗಿವೆ ಎಂದು ಮೂರು ದಶಕದ ನಂತರ ಈಗ, ಅದೇ ಹಮ್ಮು, ಹುಂಬತನದಿಂದ ಯಾವಾಗಲೋ ಒಮ್ಮೆ ಚಿತ್ರಿಸಲು ಕೂತರೆ ಈ ಜಲವರ್ಣ ನನ್ನ ನೀರಿಳಿಸಿಬಿಡುತ್ತದೆ! 'ನನ್ನ ಸಾಂಗತ್ಯವನ್ನು ನೀನು ಎಂದೋ ಬಿಟ್ಟಿರುವೆ, ಈಗ ನಾನು ನೀನು ಹೇಳಿದಂತೆ ಕೇಳಬೇಕಾ?' ಎಂದು ಪ್ರಶ್ನಿಸಿದಂತಾಗುತ್ತದೆ. ಆದನ್ನು ಕಿವಿಗೆ ಹಾಕಿಕೊಳ್ಳದೆ ನಾನು ರೂಪಾಕಾರ ತರಲು ಸತತ ಪ್ರಯತ್ನ ಮಾಡುತ್ತ ಒದ್ದಾಡುತ್ತಿರುತ್ತೇನೆ. ಆ ಪ್ರಯತ್ನದಲ್ಲಿ ಸಾಕಷ್ಟು ಸಲ ಸೋತಿದ್ದೇನೆ, ಕೆಲವು ಸಲ ಗೆದ್ದಿದ್ದೇನೆ ಅಂತ ಹೇಳಲಾಗದಿದ್ದರೂ ಸಮಾಧಾನಪಟ್ಟುಕೊಳ್ಳುವ ಮಟ್ಟಿಗಾದರೂ ಕೃತಿ ರಚನೆ ಮಾಡಿದ್ದೇನೆ. ಈ ಸಮಾಧಾನ ತಂದುಕೊಳ್ಳುವ ಮಟ್ಟಿಗಾದರೂ ರಚಿಸಲು ಸಾಧ್ಯವಾಗಿರುವುದು ಜಲವರ್ಣದ ಮೂಲಗುಣವೊಂದನ್ನು ನಾನು ತಿಳಿದುಕೊಂಡಿರುವುದು. 'ತಮಸೋಮ ಜ್ಯೋತಿರ್ಗಮಯ' ಎಂದು ಕಲಿತ ನಾವುಗಳು ಅದಕ್ಕೆ ವ್ಯತಿರಿಕ್ತವಾಗಿ ಈ ಜಲವರ್ಣ ರಚನೆಯಲ್ಲಿ ತೊಡಗಬೇಕು. ಅಂದರೆ, ಬೆಳಕಿನಿಂದ ಕತ್ತಲೆಯ ಕಡೆಗೆ ಸಾಗಬೇಕು!

Light to Dark ಅನ್ನುವುದು ಜಲವರ್ಣ ರಚನೆಯಲ್ಲಿ ಹೇಳುವ ಚಿತ್ರಕಲೆಯ ಪರಿಭಾಷೆ. ಅಂದರೆ ಕೃತಿಯಾರಂಭದಲ್ಲಿ ಮೊದಲು ತಿಳಿವರ್ಣಗಳನ್ನು ಬಳಸುತ್ತ, ನಂತರದಲ್ಲಿ ಅದರ ಮೇಲೆ ಗಾಢ ವರ್ಣಗಳ ಪದರನ್ನು ಹಾಕುತ್ತಾ ಸಾಗುವುದು. ಜಲವರ್ಣ ಒಂದು ಪಾರದರ್ಶಕ ವರ್ಣವಾಗಿರುವುದರಿಂದ ಮೊದಲಿಗೇ ದಟ್ಟ ವರ್ಣಗಳನ್ನು ಹಾಕಿಬಿಟ್ಟರೆ ಅದರ ಮೇಲೆ ತಿಳಿವರ್ಣ ಮೂಡಿಸಲು ಸಾಧ್ಯವಾಗುವುದಿಲ್ಲ. ಜಲವರ್ಣ ರಚನೆಯ ಈ ಮೂಲ ಮಂತ್ರ ಗೊತ್ತಿದ್ದರೂ ಚಿತ್ರ ರಚನೆಗೆಂದು ಪ್ಯಾಲೆಟ್ಟು, ಕಲರ್ರು, ಬ್ರಶ್ಶು, ನೀರು ಇತ್ಯಾದಿ ಪರಿಕರಗಳನ್ನು ಸಿದ್ಧಮಾಡಿಕೊಳ್ಳುತ್ತಿದ್ದಂತೆ 'ಒಂದು ಬಗೆಯ ಅಳುಕು' ಕೂಡ ಅವಶ್ಯಕ ಸಾಮಗ್ರಿಯಂತೆ ನನ್ನೊಡಗೂಡಿಬಿಡುತ್ತದೆ. ಈ ಅಳುಕು ಭಾವಚಿತ್ರ ರಚನೆಗೆ ತೊಡಗಿದಾಗ ಹೆಚ್ಚಾಗುತ್ತದೆ. ಕಾರಣ, ಚಿತ್ರಿಸುತ್ತಿರುವ ವ್ಯಕ್ತಿಯ ಹೋಲಿಕೆ ಚಿತ್ರದಲ್ಲಿ ಬರಬೇಕಿರುವುದರಿಂದ ಕುಂಚದ ಎಳೆತಗಳು